ವಿದ್ಯುಚ್ಛಕ್ತಿ ಲೈನ್‌ಮೆನ್‌ಗಳ ಬಗ್ಗೆ

೧೨೨೬. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).— ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕದಲ್ಲಿ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಎಷ್ಟು ವೃತ್ತಗಳಾಗಿ ವಿಂಗಡಿಸಲಾಗಿರುವುದು? ವಿದ್ಯುಚ್ಛಕ್ತಿ ಮಂಡಳಿಯಲ್ಲಿರುವ ಲೈನ್‌ಮನ್‌ಗಳೆಷ್ಟು ಮತ್ತು ಇವರಿಗೆ ಕೊಡುತ್ತಿರುವ ಸಂಬಳ ಎಷ್ಟು ?

ಆ) ಲೈನ್‌ಮೆನ್‌ಗಳನ್ನು ವೃತ್ತಕ್ಕೆ ವರ್ಗಾಯಿಸುವುದಿಲ್ಲವೇ ? ವರ್ಗಾಯಿಸಲು ಅನುಸೂಚಿಸುತ್ತಿರುವ ನಿಯಮಗಳೇನು ?

ಇ) ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಕರ್ನಾಟಕ ವಿದ್ಯುಚ್ಛಕ್ತಿಮಂಡಳಿಯನ್ನು ೮ ಕಾರ್ಯ ಮತ್ತು ಪಾಲನೆ ವೃತ್ತಗಳಾಗಿ ಮತ್ತು ೪ ಬೃಹತ್ ಕಾವಂಗಾರಿ ವೃತ್ತಗಳಾಗಿ ವಿಂಗಡಿಸಲಾಗಿದೆ.

ವಿದ್ಯುತ್ ಮಂಡಳಿಯಲ್ಲಿ ೩೧-೧೨-೮೭ಕ್ಕೆ ೫,೭೮೯ ಮಂದಿ ಲೈನ್‌ಮೆನ್‌ಗಳಿದ್ದಾರೆ. ಇವರ ವೇತನ ಶ್ರೇಣಿ ರೂ. ೬೭೫-೧೫೬೦.

ಆ) ಈ ಹುದ್ದೆಯು ವಿಭಾಗಾಧಿಕಾರಿಗಳ ಆಯ್ಕೆಯು ಪರಿಮಿತಿಗೊಳಪಟ್ಟಿರುತ್ತದೆಯಾದ್ದರಿಂದ ಇವರುಗಳನ್ನು ವಿಭಾಗದೊಳಗೇ ವರ್ಗಾವಣೆ ಮಾಡಬೇಕು. ಬೇರೆ ವಿಭಾಗ ವೃತ್ತಕ್ಕೆ ವರ್ಗಾವಣೆ ಮಾಡಬೇಕಾದರೆ ಪರಸ್ಪರ ಒಪ್ಪಿಗೆಯಿಂದ ಮಾತ್ರ ಸಾಧ್ಯ.

ಇ) 'ಅ' ನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.— ಲೈನ್‌ಮೆನ್‌ಗಳನ್ನು ನೇಮಕ ಮಾಡುವಾಗ ಯಾವ ಆಧಾರದ ಮೇಲೆ ನೇಮಕ ಮಾಡುತ್ತೀರಿ ? ವರ್ಕ್ ಲೋಡ್‌ಮೇಲೆ ಏನಾದರೂ ಮಾಡಿಂತ್ತೀರಾ ? ಇಲ್ಲವೇ ಇನ್‌ಸ್ಟಲೇಷನ್‌ಗಳನ್ನು ಏನಾದರೂ ಲೆಕ್ಕಕ್ಕೆ ತೆಗೆದುಕೊಂಡು ಮಾಡುತ್ತೀರಾ ? ಇದರಲ್ಲಿ ಹಳ್ಳಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತೀರಾ ? ಹೇಗೆ ?

ಶ್ರೀ ಲಕ್ಷ್ಮೀನರಸಿಂಹಯ್ಯ — ವರ್ಕ್‌ಲೋಡನ್ನು ನಾರ್ಮ್ಸ್ ಎಂದು ಯೂನಿಯನ್‌ನವರು ಮತ್ತು ಮಂಡಲಿಯವರು ಸೇರಿಕೊಂಡು ನಿಗದಿ ಮಾಡಿದ್ದಾರೆ. ಅದರ ಆಧಾರದ ಮೇಲೆ ಇಷ್ಟು ಇನ್‌ಸ್ಟಲೇಷನ್‌ಗೆ ಇಷ್ಟು ಜನ ಲೈನ್‌ಮೆನ್‌ಗಳು ಇರಬೇಕೆಂದು ನಿಗದಿ ಆಗಿದೆ. ಆದ್ದರಿಂದ ಆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಬೇಕು ಆದರೆ ೭೮ನೇ ಇಸವಿಯಿಂದೀಚೆಗೆ ನಾವು ಹೊಸದಾಗಿ ನೇಮಕ ಮಾಡಿಕೊಂಡಿಲ್ಲದೇ ಇರುವುದರಿಂದ ಈಗ ಇನ್‌ಸ್ಟಲೇಷನ್ ತುಂಬಾ ಜಾಸ್ತಿ ಬಂದಿರುವುದರಿಂದ ಸ್ವಲ್ಪ ಅವರ ಮೇಲೆ ಒತ್ತಡ ಜಾಸ್ತಿಯಾಗಿದೆ. ಆ ಕಾರಣದಿಂದ ಈ ಹಿಂದಿನ ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳುತ್ತಿದ್ದೆ. ಏನೆಂದರೆ ನೀಡ್ ಬೇಸ್ಡ್ ಅಪಾಯಿಂಟ್‌ಮೆಂಟ್ಸ್‌ನ್ನು ತಕ್ಷಣ ಮಾಡಿಕೊಳ್ಳಬೇಕು. ಎಂದು, ವರ್ಕ್ ಲೋಡ್ ನಾರ್ಮ್ಸ್ ಅನ್ನು ತೀರ್ಮಾನ ಮಾಡುವುದಕ್ಕೋಸ್ಕರವಾಗಿ ಒಂದು ಸಮಿತಿಯನ್ನು ಮಾಡಿದ್ದೇವೆ. ಅವರ ವರದಿ ಬರುವುದು ತಡವಾಗಬಹುದು. ಆದ್ದರಿಂದ ಈ ನೀಡ್ ಬೇಸ್ಡ್ ಅಪಾಯಿಂಟ್‌ಮೆಂಟ್‌ನ್ನು ಮಾಡಿಕೊಳ್ಳಬೇಕಾಗುತ್ತದೆ. ಅತ್ಯವಶ್ಯಕವಾಗಿ ಎಲ್ಲೆಲ್ಲಿ ಲೈನ್‌ಮೆನ್‌ಗಳು ಇರಬಹುದು, ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡುವವರು ಇರಬಹುದು, ಅಸಿಸ್ಟೆಂಟ್ ಇಂಜಿನಿಯರ್‌ಗಳು ಇರಬಹುದು, ಜೆ ಇ.ಗಳು ಇರಬಹುದು, ಆದ್ದರಿಂದ ಅತ್ಯವಶ್ಯಕವಾಗಿ ಒಂದೊಂದು ವಿಭಾಗದಲ್ಲಿ ಎಷ್ಟು ಬೇಕೋ ಅಷ್ಟನ್ನು ನೇಮಕಮಾಡಿಕೊಳ್ಳುವುದಕ್ಕೆ ಈಗಾಗಲೇ ಕ್ರಮ ಕೈಗೊಂಡಿದ್ದೇವೆ.

ಶ್ರೀ ಜಿ ಎಸ್. ಶಿವನಂಜಪ್ಪ.— ನನಗೆ ಗೊತ್ತಿರುವ ರೀತಿಯಲ್ಲಿ ಮಧುಗಿರಿಯ ವಿಂಡಿಗೇಸಿ ಎಂಬ ಒಂದು ಹೋಬಳಿಗೆ ಸೇರಿದಂತೆ ೬೦ ಹಳ್ಳಿಗಳು ಇದೆ. ಅಲ್ಲಿ ಒಬ್ಬ ಲೈನ್‌ಮನ್ ಸಹಿತ ಇಲ್ಲ. ೨೫ ದಿವಸದಿಂದ ಒಂದು ಕಂಬದ ತಂತಿ ಸಂಪರ್ಕ ಕಡಿದು ಹೋಗಿ ಅದನ್ನು ರಿಪೇರಿ ಮಾಡುವುದಕ್ಕೆ

ಇಪ್ಪತ್ತೈದು ದಿವಸ ಆಯಿತು. ಇದರಿಂದ ಅಲ್ಲಿನ ರೈತರಿಗೆ ಆದಂಥ ನಷ್ಟವನ್ನು ನೀವು ಯಾವ ರೀತಿ ಭರಿಸುತ್ತೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ.— ಆಕಸ್ಮಾತ್ತಾಗಿ ಇಂತಹ ಒಂದು ಘಟನೆಯೇನಾದರೂ ನಡೆದಿದ್ದರೆ ನಿಜವಾಗಲೂ ಕೂಡಾ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಅದನ್ನು ಶೀಘ್ರವಾಗಿ ಮಾನ್ಯ ಶಾಸಕರು ಅಲ್ಲಿನ ಅಧಿಕಾರಿಗಳ ಗಮನಕ್ಕೆ ತಂದಿದ್ದರೆ ಇದು ರಿಪೇರಿಯಾಗುವುದಕ್ಕೆ ಇಷ್ಟೊಂದು ಸಮಯ ತೆಗೆದುಕೊಳ್ಳುತ್ತಿರಲಿಲ್ಲವೆಂದು ನನ್ನ ಭಾವನೆ. ನಿಮ್ಮ ಗಮನಕ್ಕೂ ಇದು ಬಹಳ ತಡವಾಗಿ ಬಂದಿರ ಬಹುದು. ಅದಕ್ಕೋಸ್ಕರವಾಗಿ ಈ ರಿಪೇರಿಮಾಡುವುದಕ್ಕೆ ಇಷ್ಟು ತಡವಾಗಿರಬಹುದು

ಶ್ರೀ ಜಿ. ಎಸ್ ಶಿವನಂಜಪ್ಪ.—ಅಧ್ಯಕ್ಷರೇ, ''ಎ''ಗೆ ಉತ್ತರವಾಗಿ ಬೇರೆ ಬೇರೆ ವಿಭಾಗದಿಂದ ಬರತಕ್ಕಂಥ ಅಧಿಕಾರಿಗಳನ್ನು ಬೇರೆ ಬೇರೆ ವಿಭಾಗಕ್ಕೆ ಟ್ರಾನ್ಸ್‌ಫರ್ ಮಾಡಲಿಕ್ಕೆ ಆಗುವುದಿಲ್ಲ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಮತ್ತೆ ಇದರ ಬಗ್ಗೆ ಸರ್ಕಾರದ ಒಂದು ಸುತ್ತೋಲೆ ಸಹಾ ಇದೆ. ಏನೆಂದರೆ ಗಂಡ ಹೆಂಡತಿ ಸರ್ಕಾರಿ ನೌಕರರಾಗಿದ್ದು ಗಂಡ ಬಳ್ಳಾರಿಯಲ್ಲಿ ಕೆಲಸ ಮಾಡುತ್ತಿದ್ದು ಹೆಂಡತಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರೆ, ಇಲ್ಲಿ ಹೆಂಡತಿ ಗಂಡ ಇರುವ ಸ್ಥಳಕ್ಕಾದರೂ ಹೋಗಬಹುದು, ಇಲ್ಲ ಗಂಡನು ಹೆಂಡತಿ ಕೆಲಸ ಮಾಡುವ ಸ್ಥಳಕ್ಕಾದರೂ ಬರಬಹುದು. ಈ ರೀತಿಯ ಸಂದರ್ಭ ಬಂದಾಗ ನೀವು ಮೇಲಿನಂತೆ ಉತ್ತರ ಹೇಳಿದರೆ ಸರ್ಕಾರದವರು ''ಫೋರ್ಸ್ ಡೈವರ್ಸ್'' ಮಾಡಿದ ಹಾಗೆ ಆಗಲಿಲ್ಲವೇ ? ಅವರಿಗೆ ಒಂದು ವಿಶೇಷ ರೀತಿಯ ಸೌಲಭ್ಯವನ್ನು ಕೊಟ್ಟು ಇಂಥ ಒಂದು ಸಂದರ್ಭದಲ್ಲಿ ಅವರನ್ನು ಟ್ರಾನ್ಸ್‌ಫರ್ ಮಾಡಲಿಕ್ಕೆ ಸರ್ಕಾರ ಅಥವಾ ಮಂಡಳಿಯಂ ವಿರೋಧ ಏನು ಇದೆ ಅದರಿಂದ ಏನು ತೊಂದರೆಯಾಗುತ್ತಿದೆ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಶಿವನಂಜಪ್ಪನವರು ಲೈನ್‌ಮೆನ್ ಬಗ್ಗೆ ಬಹಳ ಕೇಳುತ್ತಿದ್ದಾರೆ. ನಾವು ಇಲ್ಲಿಯವರೆಗೆ ಹೆಣ್ಣುಮಕ್ಕಳನ್ನು ಲೈನ್‌ಮೆನ್ ಆಗಿ ಅಪಾಯಿಂಟ್ ಮಾಡಿಕೊಂಡಿಲ್ಲ. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿ ಮಂಡಳಿಯಲ್ಲಿ ಅಪಾಯಿಂಟಿಂಗ್ ಅಥಾರಿಟಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಇರಬಹುದು ಅವರು ಅವರ ಡಿವಿಜನ್‌ನಲ್ಲಿ ಟ್ರಾನ್ಸ್‌ಫರ್ ಮಾಡಲಿಕ್ಕೆ ಅವಕಾಶ ಇರುತ್ತದೆ ಬೇರೆ ಡಿವಿಜನ್‌ಗಳಿಗೆ ಬೇರೆ ಸರ್ಕಲ್‌ಗಳಿಗೆ ಮಾಡುವುದಿಲ್ಲ. ಆದರೆ ಪರಸ್ಪರ ಇಷ್ಟಪಟ್ಟರೆ ಬೇರೆ ಸರ್ಕಲ್‌ಗಳಿಗೆ ವರ್ಗಾವಣೆಯನ್ನು ಮಾಡುವುದಕ್ಕೆ ಅವಕಾಶ ಇದೆ. ಇವರೇ ಅಲ್ಲಿಗೆ ಹೋಗ ತಕ್ಕಂಥವರನ್ನು ಹಿಡಿದು ಇಲ್ಲಿಗೆ ಬರತಕ್ಕಂಥವರು ಯಾರಾದರೂ ಇದ್ದರೆ ಅವರು ಇವರು ಇಬ್ಬರೂ ಸೇರಿ ಪರಸ್ಪರ ವರ್ಗಾವಣೆಗೆ ಅರ್ಜಿಯನ್ನು ಕೊಟ್ಟಲ್ಲಿ ಅದನ್ನು ಗ್ಯಾರಂಟಿ ಆಗಿ ಮಾಡಿಕೊಡುತ್ತೇವೆ.

ಗ್ರಾಮ ಕೈಗಾರಿಕೆಗಳ ಕಾಯಕ ಕೇಂದ್ರ

೧೫೪೯. ಶ್ರೀ ಚಂದ್ರಕಾಂತ ಜಿ. ಬೆಲ್ಲದ್ (ಧಾರವಾಡ ಶಹರ). ಮಾನ್ಯ ಬಂದರು ಮೀನುಗಾರಿಕೆ ಹಾಗೂ ಸಣ್ಣ ಕೈಗಾರಿಕೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಮಾದರಿಯಾದ ಗ್ರಾಮ ಕೈಗಾರಿಕೆಗಳ ಕಾಯಕ ಕೇಂದ್ರ ಎಂದು ಯಾವುದಾದರೂ ಯೋಜನೆ ಜಾರಿಯಲ್ಲಿದೆಯೇ ಹಾಗಾದರೆ ಆವುಗಳ ವಿವರ ಕೊಡುವುದು.

ಆ) ಗ್ರಾಮ ಕೈಗಾರಿಕೆಗಳಾದ ಕುಂಬಾರ, ಕಮ್ಮಾರ, ಮೇದಾರ, ಬಡಿಗ ಹಾಗೂ ಹಗ್ಗ ವಗೈರೆ ಮಾಡುವ ಇವರಿಗೆ ಅಭಿವೃದ್ಧಿ ಯೋಜನೆಯೇನಾದರೂ ರೂಪಿಸಿದೆಯೇ?

ಇ) ಧಾರವಾಡ ಶಹರದ ಸಮೀಪದಲ್ಲಿ ಒಂದು ಕಾಯಕ ಕೇಂದ್ರ ಮಾದರಿಯಾಗಿ ರೂಪಿಸುವಲ್ಲಿ ಕಾರ್ಯಗಾರ ಸಹಿತ ವಸತಿ ಕಟ್ಟಡಗಳನ್ನು ರೂಪಿಸಿ ಸಹಕಾರ ಸಮಾಜ ನಿರ್ಮಾಣ ಮಾಡುವ ಯೋಜನೆಗೆ ಸಹಾಯಮಾಡಲು ಸರ್ಕಾರ ಆಲೋಚಿಸಿದೆಯೇ ?

ಶ್ರೀ ಎಂ. ರಘುಪತಿ (ಬಂದರು, ಮೀನುಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು). —

ಅ) ರಾಜ್ಯದಲ್ಲಿ ಗ್ರಾಮ ಕೈಗಾರಿಕೆಗಳ ಕಾಯಕ ಕೇಂದ್ರ ಎಂಬ ಯೋಜನೆ ಜಾರಿಯಲ್ಲಿಲ್ಲ.